10

# ಯೇಸುವಿನ ಮಾನವತೆಯ ಅತ್ಯುನ್ನತ ಸ್ಥಿತಿ: ಆತನ ಮರಣ ಹಾಗೂ ಪುನರುತ್ಥಾನ

ಯೇಸುವಿನ ಮಾನವತೆಯ ಅತ್ಯುನ್ನತೆಯು ಯಾವುದಾಗಿತ್ತು? "ಪೂರ್ಣ ಮನುಷ್ಯನಂತೆ" ಯೇಸುವಿನ ಎರಡು ಅತಿ ದೊಡ್ಡ ಉದಾಹರಣೆಗಳನ್ನು ನಾವು ಸೂಚಿಸಿದ್ದೇವೆ. ಅವು ಆತನ ಪ್ರಾರ್ಥನೆಯ ಜೀವಿತ ಮತ್ತು ಕಲ್ವಾರಿಯಲ್ಲಿ ಆತನ ಮರಣ. ಹೆಸರಿಗೆ ಯೋಗ್ಯವಾದ ಪ್ರಾರ್ಥನೆ ಹಾಗೂ ಮರಣವನ್ನು ದೃಷ್ಟಿಸುವ ಗಂಭೀರ ತೆಗಳು ಅವಲಂಭಿಸಿದ ಹಾಗೂ ಕೇವಲ ಮಾನವತೆಯ ಸೂನ್ಯತೆಯ ಪುರಾವೆಗಳ ಕಾರಣದಿಂದ ಇದು ಹೇಳಲ್ಪಟ್ಟಿದೆ. ಪ್ರಾರ್ಥನೆಯಲ್ಲಿ ನಾವು ಅವಲಂಭಿಸಿರುವ ಒಬ್ಬಾತನ ಚಿತ್ತವನ್ನು ಹುಡುಕುತ್ತೇವೆ. ಮರಣದಲ್ಲಿ ನೈತಿಕತೆಯನ್ನು ದಾಟಿಹೋಗುವ ಆತನಲ್ಲಿಯ ಜೀವಿತವನ್ನು ಮುನ್ನೋಡುತ್ತೇವೆ.

ಪರಿಶುದ್ಧ ಬರಹಗಳಲ್ಲಿ ಯೇಸುವು ಪ್ರಾರ್ಥಿಸುವದನ್ನು ಕೇಳುತ್ತೇವೆ ಮತ್ತು ಶಿಲುಬೆಯ ಮೇಲೆ ಸಾಯುವದನ್ನು ನೋಡುತ್ತೇವೆ. ಈ ಅನುಭವವು ಯೇಸುವಿನ ನಿಜವಾದ ಮಾನವತೆಯ ವ್ಯಕ್ತ ಪಡಿಸುವಿಕೆಯನ್ನು ದೃಢಪಡಿಸುತ್ತದೆ, "ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ?" (ಮಾರ್ಕ 15:34) ಎಂದು ಆತನು ಶಿಲುಬೆಯಿಂದ ಕೂಗಿದಾಗ, ಹೇಗೆ ಪ್ರಾರ್ಥಿಸಬೇಕೆಂದು ನಮಗೆ ಕಲಿಸುವದಕ್ಕಾಗಿ ಆತನು ಒಂದು ಅವಕಾಶವನ್ನು ಹಿಡಿಯುತ್ತಿರುವದಿಲ್ಲ. ನಾನೂ ನೀನೂ ಗ್ರಹಿಸಿಕೊಳ್ಳ ಲಾರದಂಥ ಅತಿಯಾದ ಮಾನಸಿಕ ಮರಣ ವ್ಯಥೆಯಿಂದಲೂ ದೈಹಿಕ ಶ್ರಮೆಯ ಆಳದಿಂದಲೂ ಆತನು ಕರೆಯುತ್ತಿದ್ದನು. ನಾವು ಅಲ್ಲಿ ಎಂದೂ ಇಲ್ಲದ್ದರಿಂದಲೂ ಎಂದೂ ಅಲ್ಲಿ ಇರುವದಿಲ್ಲವಾದ್ದರಿಂದಲೂ ಹಾಗೂ ಅಲ್ಲಿ ಇರಲಿಕ್ಕಾಗದ್ದರಿಂದಲೂ ನಾವು ಅದನ್ನು ಗ್ರಹಿಸಿಕೊಳ್ಳಲಾರೆವು. ನಾವೆಂದೂ ತಾನೇ ಜೀವಿಯಾದ ಸೃಷ್ಟಿಕರ್ತನಾಗಿರುವದಿಲ್ಲ. ಮಾನವನಾಗಲು ಆ ಮಹಿಮೆಯಿಂದ ತನ್ನನ್ನು ಬರಿದು ಮಾಡಿಕೊಂಡ ದೇವತ್ವವೂ ನಾವಾಗಿರುವದಿಲ್ಲ. ನೀನು ಮತ್ತು ನಾನು ಪ್ರಶಂಸಾರ್ಹವಾದ ಜೀವಿತಗಳನ್ನು ಜೀವಿಸ ಬಹುದು ಮತ್ತು ನೋವು ತುಂಬಿದ ಮರಣಗಳಿಂದ ಸಾಯಬಹುದು. ಆದರೆ ಪಾಪರಹಿತ ಜೀವಿತವನ್ನು ಎಂದೂ ಜೀವಿಸಲಾರೆವು. ಎಂದೂ ಪರಿಪೂರ್ಣ ಯಜ್ಞವಾಗಿ ನಮ್ಮನ್ನು ಸಮರ್ಪಿಸಲಾರೆವು, ಕೇವಲ ಏಕಾಂತತೆಯಲ್ಲಿ ಹಾಗೂ ಯಾತನೆಯ ಪೀಡಿಯಲ್ಲಿ ಶಿಲುಬೆಯ ಮೇಲೆ ನೇತಾಡುತ್ತ ಯೇಸುವಿನಂತೆ ಯಾರೂ ಮಾಡಲಾರರು.

ಅತೀ ಸಂಪೂರ್ಣವಾದ ಆದರ್ಶದ ಜೀವನವನ್ನು ಯೇಸುವು ಜೀವಿಸಿದ್ದಲ್ಲದೆ (ಇಬ್ರಿಯ 4:15; 1 ಪೇತ್ರ 2:22), ಯಾರೂ ಎಂದೂ ಮರಣಹೊಂದದ ಸಂಪೂರ್ಣ ವಾಗಿ ಅತೀ ಅವಮಾನಕರವಾದ ಮರಣವನ್ನು ಹೊಂದಿದನು (2 ಕೊರಿಂಥ 5:21).

ಮನುಷ್ಯನಂತೆ ತನ್ನ ನಿಯೋಗವನ್ನು ಪೂರ್ತಿಕೊಳಿಸಲು ಜೀವಿಸುವಿಕೆಯ ಅತೀ ಉನ್ನತಕ್ಕೇರಿಸಲ್ಪಟ್ಟ ಅನುಭವಗಳನ್ನು ಹಾಗೂ ಯೇಸುವಿಗಾಗಿ ಸಾಯುವ ಅತೀ ವಿಪರೀತವಾದ ಅನುಭವವನ್ನು ತೆಗೆದು ಕೊಂಡಿತು. ನಾವು ಅನುಸರಿಸುವದಕ್ಕಾಗಿ ಒಂದು ಉದಾಹರಣೆಯನ್ನು ಸ್ಥಾಪಿಸಲು ಆತನು ಭೂಲೋಕಕ್ಕೆ ಬರಲಿಲ್ಲ (1 ಪೇತ್ರ 2:21). ಕೇವಲ ಜೀವನದ ಅತ್ಯುನ್ನತ ವಾಕ್ಯವನ್ನು ಕಲಿಸಲಿಕ್ಕೆ ಮಾತ್ರವೇ ಆತನು ಬರಲಿಲ್ಲ (ಯೋಹಾನ 6:63). "ದೇವರು ತನ್ನ ಕುಮಾರನ ಮುಖಾಂತರ ಲೋಕಕ್ಕೆ ರಕ್ಷಣೆಯಾಗ ಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪುಮಾಡುವದಕ್ಕಾಗಿ ಕಳುಹಿಸಲಿಲ್ಲ" (ಯೋಹಾನ 3:17) ಎಂದು ಯೇಸು ತಾನೇ ಹೇಳಿದನು.

ಆತನ ನಿಯೋಗವು ಜನಿಸುವ, ಜೀವಿಸುವ ಮತ್ತು ಸಾಯುವದಕ್ಕಿಂತ ಹೆಚ್ಚಾದ್ದನ್ನು ಒಳಗೊಂಡಿತ್ತು. ತನ್ನ ನಿಯೋಗವನ್ನು ಪೂರ್ತಿಗೊಳಿಸಲು, ಆತನ ಜನನವು *ಅದ್ವಿತೀಯವಾದದ್ದಾಗಿತ್ತು. ಆತನ ಜೀವಿತವು ದೋಷವಿಲ್ಲದ್ದಾಗಿರಬೇಕಾಗಿತ್ತು ಮತ್ತು ಆತನ ಮರಣವು ಅತಿಶಯವಾಗಿ ನಿಜವಾದದ್ದಾಗ ಬೇಕಾಗಿತ್ತು.* ಭೂಲೋಕದಲ್ಲಿಯ ಆತನ ಜೀವನದ ಎಲ್ಲಾ ವಿಷಯಗಳಲ್ಲಿ, ಯೇಸುವು ಎಂದಾದರೂ ಜೀವಿಸಿದ ಬೇರೆ ಯಾವುದೇ ಇತರ ಮಾನವ ಜೀವಿಗೆ ಶ್ರೇಷ್ಠವಾದ ಮಾನವ ಸ್ವಾಭಾವವನ್ನು ಪ್ರಕಟಿಸಿದನು. ಆತನು ಪರಿಪೂರ್ಣನಾಗಿದ್ದನು - ಆತನು "ಅರ್ಧ ದೇವರು" ಆಗಿದ್ದ ಕಾರಣದಿಂದ ಅಲ್ಲ. ಆದರೆ ಆತನು ನಿಜವಾಗಿಯೂ ಮಾನವನಾಗಿದ್ದುದರಿಂದ ಮತ್ತು ಯಾವುದೇ ಕಳಂಕ, ಸುಕ್ಕು ಇಲ್ಲದೇ ಜೀವಿಸಿದ್ದರಿಂದ ಶ್ರೇಷ್ಠವಾದ ಜೀವಿತ ಜೀವಿಸಿದ್ದಾನೆ. ಜನನದಿಂದ ಮರಣದ ವರೆಗೆ ಪಾಪರಹಿತ ಜೀವನ - ಜೀವಿಸಿದ ಮಾನವರ ಎಲ್ಲಾ ಚರಿತ್ರೆಯಲ್ಲಿ ಯೇಸುವು ಒಂದೇ ಒಂದು ಉದಾಹರಣೆಯಾಗಿದ್ದಾನೆ.

## ಆತನ ಮರಣ

ಈ ಕೇವಲ ಶುದ್ಧನೂ ಸಮಾಧಾನವುಳ್ಳವನೂ ಆದ ಯೇಸುವು ತಪ್ಪಿ ಹೋದವರನ್ನು ರಕ್ಷಿಸಲಿಕ್ಕೆ ತನ್ನ ನಿಯೋಗವನ್ನು ಹೇಗೆ ಪೂರ್ತಿಗೊಳಿಸಿದನು/ಅದು ಗೆತ್ಸೇಮನೆಯ ಸಮಸ್ಯೆಯಾಗಿತ್ತು. ತನ್ನ ತಂದೆಯ ಚಿತ್ತವನ್ನು ಮಾಡಲು ಆತನು ಸಿದ್ಧನಾಗಿದ್ದನು: "ಏಕಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿ ಬಿಟ್ಟನು" (1 ತಿಮೊಥೆ 2:5, 6ಎ). "ಮನುಷ್ಯ ಕುಮಾರನು ಸಹ ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವದಕ್ಕೂ ಬಂದನು" (ಮಾರ್ಕ 10:45) ಎಂದು ಯೇಸು ಹೇಳಿದನು.

ಅಂಥ ಶುದ್ಧನಾದ ಮತ್ತು ಪ್ರೀತಿ ಭರಿತನಾದ ವ್ಯಕ್ತಿಯನ್ನು ಯಜ್ಞವಾಗಿ ಯಾಕೆ ಅರ್ಪಿಸಬೇಕು - ಹಾಗೂ ಯಾಕೆ ಮರಣವು ಅಷ್ಟು ತೀಕ್ಷ್ಣವಾದದ್ದೂ ವಿಪರೀತವಾದದ್ದೂ ಆಗಿರತಕ್ಕದ್ದು? ದೇವರ ಪರಿಶುದ್ಧತೆಯು ಘನತೆಗೇರಿಸಲ್ಪಟ್ಟದ್ದು ಇದಕ್ಕೆ ಕಾರಣವಾಗಿದೆ. ಆತನ ಬದಲಾಗದಿರುವಿಕೆಯು ಮತ್ತು ನಿರಂಕುಶ ನ್ಯಾಯವು ಕಾರಣವಾಗಿದೆ. ಆತನ ಪರಿಶುದ್ಧತೆಯು ಪಾಪವನ್ನು ಅಸಹ್ಯಿಸುತ್ತದೆ: ಆತನ ನ್ಯಾಯವು ಪ್ರತಿಯೊಂದು ಪಾಪವು ದಂಡಿಸಲ್ಪಡ ಬೇಕೆಂದು ಕೇಳುತ್ತದೆ. ತಪ್ಪಿಸಿಕೊಳ್ಳುವ ಉಪಾಯವೇ ಇಲ್ಲ. ಪ್ರೀತಿ ಮತ್ತು ತಾಳ್ಮೆಯೆ ತತ್ವಗಳ ಮೇಲೆ ತನ್ನ ಮಕ್ಕಳ ಕೆಟ್ಟ ಕಾರ್ಯಗಳನ್ನು ಬದಿಗಿಡುವ ತಂದೆಯಂತೆ ದೇವರು ಇರುವದಿಲ್ಲ. ಅದಕ್ಕೆ ವಿರುದ್ಧವಾಗಿ, "ಪ್ರತಿಯೊಂದು ತಪ್ಪಿಗೂ ಅವಿಧೇಯ

ತ್ವಕ್ಕೂ ನ್ಯಾಯವಾದ ಪ್ರತಿಫಲವುಂಟಾಯಿತು" (ಇಬ್ರಿಯ 2:2ಬ) ಎಂದು ಪುರಾತನ ಕಾಲದಿಂದಲೇ ಹೇಳಲ್ಪಟ್ಟಿದೆ ಮತ್ತು, "ಮೋಶೆಯ ವಿಧಿಗಳನ್ನು ಅಸಡ್ಡೆ ಮಾಡಿದವನಿಗೆ ಇಬ್ಬರು ಅಥವಾ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣದಂಡನೆ ಆಗುತ್ತದಷ್ಟೇ" (ಇಬ್ರಿಯ 10:28) ಎಂದೂ ಹೇಳಲ್ಪಟ್ಟಿದೆ. ಹೊಸ ಒಡಂಬಡಿಕೆಯಲ್ಲಿ "ಒಂದೇ ಸಾರಿ ಸಾಯುವುದೂ ಆಮೇಲೆ ನ್ಯಾಯ ತೀರ್ಪೂ ಮನುಷ್ಯರಿಗೆ ನೇಮಕ ವಾಗಿದೆ" (ಇಬ್ರಿಯ 9:27) ಎಂದು ಹೇಳಲ್ಪಟ್ಟಿದೆ. ಪಾಪವು ಗಂಭೀರವಾದದ್ದಾಗಿದೆ; ಅದು ಕ್ಷಮಿಸಲ್ಪಡದಿದ್ದರೆ ಅದು ಮರಣಾಂಕಿತವಾದದ್ದಾಗಿರುತ್ತದೆ.

ನಮ್ಮ ಪಾಪಗಳಿಗಾಗಿ ಪಾಪರಹಿತನಾದ ಕ್ರಿಸ್ತನ ಸಂಪೂರ್ಣ ಯಜ್ಞದ ರೀತಿಯು ಪರಿಪೂರ್ಣವಾಗಿ ಪರಿಶುದ್ಧನಾದ ದೇವರಿಂದ ಕೇಳಲ್ಪಟ್ಟ ನ್ಯಾಯವು ನೆರವೇರಿ ಸಲ್ಪಡ ಬಹುದಿತ್ತು. ಆದುದರಿಂದ, ತನ್ನ ತಂದೆಯಾದ ದೇವರ ಚಿತ್ತಕ್ಕೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿದ ದೇವರ ಕುಮಾರನು ವಿಮೋಚನಾ ಕ್ರಯವನ್ನು ಕೊಟ್ಟನು. ಆತನ ದೇಹ ಹಾಗೂ ರಕ್ತವು (ಆತನ ಜೀವವೇ) ದೇವರ ನ್ಯಾಯದ ಎಲ್ಲಾ ಅವಶ್ಯಕತೆಯು ನೆರವೇರುವಂತೆ ಅಂಥ ಅಳೆಯಲಾಗದ ಬೆಲೆಯ ಯಜ್ಞವು ಒದಗಿಸಲ್ಪಟ್ಟಿತು. ಈ ವರವನ್ನು ಸ್ವೀಕರಿಸುವದನ್ನು ಆತನು ಕ್ಷಮಿಸಿದನು. ಆತನ ಸಂಪೂರ್ಣ ಜೀವದೊಂದಿಗೆ ತಂದೆಯು ಸಂಪೂರ್ಣವಾಗಿ ಸಾಮರಸ್ಯದಲ್ಲಿ ಇರುವನು. *"ಕರುಣೆಯು ನ್ಯಾಯ ತೀರ್ಮಾನವನ್ನು ಗೆದ್ದು ಹಿಗ್ಗುತ್ತದೆ"* (ಯಾಕೋಬ 2:13).

ಯೇಸುವು ಸಾಯುತ್ತಿರುವಂತೆ, "ತಂದೆಯೇ, ಅವರನ್ನು ಕ್ಷಮಿಸು; ಯಾಕಂದರೆ ಅವರು ಏನು ಮಾಡುತ್ತಿರುವರೋ ಎಂಬುದನ್ನು ಅರಿಯರು"; "ತೀರಿತು!"; "ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗಳಲ್ಲಿ ಅರ್ಪಿಸುತ್ತೇನೆ" ಎಂದು ಹೇಳಿದನು (ಲೂಕ 23:34; ಯೋಹಾನ 19:30; ಲೂಕ 23:46). "ತೀರಿತು!" ಆ ಮಾತುಗಳ ಸಂಪೂರ್ಣ ಮಹತ್ವವನ್ನು ಮಾನವ ಮನಸ್ಸಿಗೆ ಅರ್ಥಮಾಡಿಕೊಳ್ಳುವುದು ಅಸಾಧ್ಯವಾಗುವುದು. ಆದಾಗ್ಯೂ ಯೇಸುವು ತಿಳಿದಿದ್ದನು; ಭಯಂಕರವಾದ ಮರಣದ ಬಾಧೆಗಳನ್ನು ಆತನು ಸಹಿಸಿದರೂ ಪ್ರಶಾಂತವಾಗಿ ಮರಣ ಹೊಂದಿದನು. ಈಗ ಎರವಾಗಿ ಪಡೆದ ಸಮಾಧಿಯಿಂದ ಪುನರುತ್ಥಾನದಿಂದ ಪ್ರಾರಂಭಿಸಿ ತನ್ನ ತಂದೆಯ ಮನಗೆ ಪ್ರಯಾಣ ಉಳಿದಿತ್ತು. ಆತನ ಮಾನವತೆಯು ಅದರ ಮಿತಿಗಳಿಗೆ ವಿಸ್ತರಿಸಲ್ಪಟ್ಟಿತು. ಆತನ ಜನನವು ಮಹಿಮೆಯುಳ್ಳದ್ದಾಗಿತ್ತು (ಲೂಕ 2:6, 7, 13, 14). ಆತನ ಜೀವಿತವು ಪರಮ ಶ್ರೇಷ್ಠ ವಾಗಿ ಶುದ್ಧವಾಗಿತ್ತು. ವಿರೋಧಾಭಾಸವಾಗಿ, ಆತನ ಮರಣವು ಆತನ ಜಯವಾಗಿತ್ತು. ಆತನು ತನ್ನ ತಂದೆಯ ಚಿತ್ತವನ್ನು ಮಾಡುವದಕ್ಕಾಗಿ ಬಂದಿದ್ದನು (ಯೋಹಾನ 6:38) ಹಾಗೂ ಆತನು ಅದನ್ನು ಮಾಡಿದನು.

## ಆತನ ಪುನರುತ್ಥಾನ

ಯೇಸುವಿನ ಪುನರುತ್ಥಾನವು ಆತನ ಸತ್ಯಸ್ಥಾಪನೆಯಾಗಿತ್ತು - ಮತ್ತು ಎಂಥಾ ಪುನರುತ್ಥಾನ! ಮಾನವ ಕಿವಿಗಳಿಂದ ಕೇಳಲ್ಪಡದೇ ಇದ್ದದ್ದು, ಮಾನವ ಹಸ್ತಗಳಿಂದ ಸ್ಪರ್ಶಿಸದೇ ಇದ್ದದ್ದು, ಮಾನವ ಕಣ್ಣುಗಳಿಂದ ನೋಡದೇ ಇದ್ದದ್ದು, ಮಾನವ ಮನಸ್ಸುಗಳಿಂದ ಗ್ರಹಿಸಲ್ಪಡದೇ ಇದ್ದದ್ದು, ಯೇಸುವು ಜೀವಂತರ ನಾಡಿಗೆ ಹಿಂದಿರುಗಿದನು.

ಆತನ ಪುನರುತ್ಥಾನ ಮತ್ತು ಆತನ ದಿವಾರೋಹಣದ ಮಧ್ಯದ ಅವಧಿಯಲ್ಲಿ, ಆತನು ನೂರಾರು ಜನರಿಗೆ ಕಾಣಿಸಿಕೊಂಡನು (1 ಕೊರಿಂಥ 15:1-8). ಆತನ

ಪುನರುತ್ಥಾನದ ನಂತರ ಯೇಸುವಿನ ಅನೇಕ ದರ್ಶನಗಳು ಮಾನವ ದೃಷ್ಟಿಕೋನದಿಂದ ವಿಚಿತ್ರವಾದ ತೊಡಗೆಯಿಂದ ಹೊದಿಸಲ್ಪಟ್ಟಿದ್ದವು. ಕೆಲವು ಉದಾಹರಣೆಗಳನ್ನು ಗಮನಿಸಿರಿ. ಮಗ್ದಲದ ಮರಿಯಳು ಭಾನುವಾರದ ಉದಯದಲ್ಲಿ, ಇನ್ನೂ ಕತ್ತಲೆಯು ಇದ್ದಾಗ, ಯೇಸುವು ಹೂಣಿಡಲ್ಪಟ್ಟ ಸ್ಥಳಕ್ಕೆ ಹೋದಳು. ಸಮಾಧಿಯ ಬಾಗಿಲು ತೆರೆದಿರುವದನ್ನು ಆಕೆ ನೋಡಿದಳು, ಆತನ ದೇಹವು ಸ್ಥಳಾಂತರಿಸಲ್ಪಟ್ಟಿದೆ ಎಂದು ಯೋಚಿಸಿದಳು. ಆಕೆ ಅಳುತ್ತಿದ್ದಾಗ, ಯೇಸುವು ಕಾಣಿಸಿ ಕೊಂಡು ಆಕೆಯೊಂದಿಗೆ ಮಾತಾಡಿದನು. "ನನ್ನನ್ನು ಹಿಡಿಯಬೇಡ, ಯಾಕಂದರೆ ನಾನು ಇನ್ನೂ ತಂದೆಯ ಬಳಿಗೆ ಏರಿಹೋದವನಲ್ಲ. ನೀನು ನನ್ನ ಸಹೋದರರ ಬಳಿಗೆ ಹೋಗಿ - ನಾನು ನನ್ನ ತಂದೆಯೂ ನಿಮ್ಮ ತಂದೆಯೂ ನನ್ನ ದೇವರೂ ನಿಮ್ಮ ದೇವರೂ ಆಗಿರುವಾತನ ಬಳಿಗೆ ಏರಿಹೋಗುತ್ತೇನೆ" ಎಂದು ಹೇಳಿದನು (ಓದಿರಿ ಯೋಹಾನ 20:1-18). ಮಹಿಳೆಯರ ಗುಂಪು ಹನ್ನೊಂದು ಜನ ಅಪೊಸ್ತಲರಿಗೆ ಯೇಸುವು ಎದ್ದಿದ್ದಾನೆ ಎಂದು ಹೇಳಿದಾಗ, "ಈ ಮಾತುಗಳು ಅವರಿಗೆ ಬರೀ ಹರಟೆಯಾಗಿ ತೋರಿದವು; ಅವರು ನಂಬಲಿಲ್ಲ" (ಓದಿರಿ ಲೂಕ 24:6-11). ಪೇತ್ರನು ಖಾಲಿಯಾದ ಸಮಾಧಿಯನ್ನು ನೋಡಿದರೂ "ನಡೆದ ಸಂಗತಿಗೆ ತನ್ನಲ್ಲಿ ಆಶ್ಚರ್ಯಪಡುತ್ತಾ ಹೊರಟು ಹೋದನು" (ಲೂಕ 24:12ಬಿ). ಅನಂತರ ಅದೇ ದಿನ, ಇಬ್ಬರು ಪುರುಷರು ಆತನೊಂದಿಗೆ ಊಟ ಮಾಡಿದರು. ಮೊದಲು ಅವರು ಆತನನ್ನು ಗುರುತಿಸಲಿಲ್ಲ; ಅವರು ಆತನನ್ನು ಗುರುತು ಹಿಡಿದ ಕೂಡಲೇ, ಆತನು ಅದೃಶ್ಯನಾದನು (ಲೂಕ 24:13-31). ಸ್ವಲ್ಪ ಸಮಯದ ನಂತರ, ಯೆರೂಸಲೇಮಿನಲ್ಲಿ, ಅಪೊಸ್ತಲರೊಂದಿಗೆ ಕೂಡಿಬಂದವರಿಗೆ ಯೇಸುವು ಕಾಣಿಸಿಕೊಂಡನು. "ಅವರು ದಿಗಿಲು ಬಿದ್ದು ಭಯಹಿಡಿದವರಾಗಿ ತಾವು ಕಂಡದ್ದನ್ನು ಭೂತವೆಂದು ಭಾವಿಸಿದರು." ಆತನು ತಾನು ಭೂತವಲ್ಲವೆಂದು ಭರವಸೆ ಕೊಟ್ಟನು, ತನ್ನ ಕೈಗಳಲ್ಲಿ ಪಾದಗಳಲ್ಲಿ ಶಿಲುಬೆಯ ಗಾಯದ ಗುರುತುಗಳೊಂದಿಗೆ ತಾನು ಮಾಂಸವೂ ರಕ್ತವೂ ಆಗಿದ್ದೇನೆಂದು ತೋರಿಸಿದನು (ಲೂಕ 24:36-43).

ಒಂದು ವಾರದ ನಂತರ ಬಾಗಿಲು ಮುಚ್ಚಿದ ಕೋಣೆಯೊಳಗೆ ಇದ್ದ ತನ್ನ ಎಲ್ಲಾ ಅಪೊಸ್ತಲರಿಗೆ ಯೇಸುವು ಕಾಣಿಸಿಕೊಂಡನು. ಮೊದಲು ಅವರಿಗೆ ಯೇಸುವು ಕಾಣಿಸಿಕೊಂಡಾಗ ತೋಮನು ಅಲ್ಲಿರಲಿಲ್ಲ. ಯೇಸುವಿನ ಪುನರುತ್ಥಾನದ ಬಗ್ಗೆ ಅವನು ಸಂಶಯ ವ್ಯಕ್ತಪಡಿಸಿದ್ದನು. ಈಗ ಅವನು ಅವರೊಂದಿಗೆ ಇದ್ದನು. ಯೇಸುವು ಆತನೊಂದಿಗೆ ಮಾತಾಡಿದನು: "ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿ ನೋಡು; ನಿನ್ನ ಕೈಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ, ನಂಬುವವನಾಗು ಎಂದು ಹೇಳಿದನು. ತೋಮನು ಆತನಿಗೆ, *'ನನ್ನ ಕರ್ತನೇ, ನನ್ನ ದೇವರೇ'* ಎಂದು ಹೇಳಿದನು!" (ಯೋಹಾನ 20:27, 28; ಒತ್ತಿ ಹೇಳಿದ್ದು ನನ್ನದು).

ಗಲಿಲಾಯದಲ್ಲಿ ಯೇಸುವು ಹನ್ನೊಂದು ಜನ ಅಪೊಸ್ತಲರಿಗೆ ಕಾಣಿಸಿಕೊಂಡಾಗ, ಹಾಗೂ ಮಹಾ ಆಜ್ಞೆಯನ್ನು ಅವರಿಗೆ ಕೊಟ್ಟಾಗ, "ಅಲ್ಲಿ ಆತನನ್ನು ಕಂಡು ಆತನಿಗೆ ಅಡ್ಡಬಿದ್ದರು; ಆದರೆ ಕೆಲವರು ಸಂದೇಹಪಟ್ಟರು" (ಮತ್ತಾಯ 28:16, 17). ಪುನರುತ್ಥಾನದ ನಂತರದ ನಲ್ವತ್ತು ದಿನಗಳ ಅವಧಿಯಲ್ಲಿ ಯೇಸುವು ಅಪೊಸ್ತಲರಿಗೆ ಕಾಣಿಸಿಕೊಂಡನು ಎಂದು ಲೂಕನ ಸುವಾರ್ತೆಯಲ್ಲಿ ಓದುತ್ತೇವೆ. ಅಪೊಸ್ತಲರ ಕೃತ್ಯ 1:3ರ ಪ್ರಕಾರ, ತನ್ನನ್ನು ಜೀವಂತನೆಂದು ಅನೇಕ ಪ್ರಮಾಣಗಳಿಂದ ಅಪೊಸ್ತಲರಿಗೆ ತೋರಿಸಿಕೊಂಡನು. ಕೊನೆಗೆ, ಎಣ್ಣೆಮರಗಳ ಬೆಟ್ಟಕ್ಕೆ ಬೇಥಾನ್ಯದ ಸಮೀಪ ಕರೆದುಕೊಂಡು ಹೋದನು ಮತ್ತು ಪರಲೋಕದೊಳಗೆ ತೆಗೆದುಕೊಳ್ಳಲ್ಪಟ್ಟನು (ಲೂಕ 24:51).

ಈ ಘಟನೆಗಳಲ್ಲಿ ಅನೇಕವುಗಳು ವಿಚಿತ್ರವಾದ ತೊಡಿಗೆಯಿಂದ

ಹೊದಿಸಲ್ಪಟ್ಟಿವೆಯೆಂದು ನಾವು ಯಾಕೆ ಹೇಳಿದ್ದೇವೆ? ಯೇಸುವಿನ ಪುನರುತ್ಥಾನವನ್ನು ಸ್ವೀಕರಿಸುವದರಲ್ಲಿ ಶಿಷ್ಯರಿಗೆ ಕಠಿಣವಾದದ್ದು ಕಾರಣವೋ? ಅನೇಕರಿಗೆ ಕಷ್ಟವಾಯಿತು ಸರಿ, ಆದರೆ ಅದು ನಿರೀಕ್ಷಿಸಲ್ಪಟ್ಟಿತ್ತು. ಒಂದು ತತ್ವದಂತೆ ದೈವಜ್ಞಾನ ಶಾಸ್ತ್ರವಾಗಿ ಪುನರುತ್ಥಾನವನ್ನು ಚರ್ಚಿಸುವುದು ಸುಲಭವಾಗಿದೆ; ಅದನ್ನು ಅಕ್ಷರಶಃವಾದ ಘಟನೆಯಂತೆ ಕಲ್ಪಿಸುವುದು ಸುಲಭವಾದದ್ದಾಗಿರುವದಿಲ್ಲ. ಪುನರುತ್ಥಾನವು ಕೆಳಗಿನ ಲೋಕದ ಆಯಾಮವನ್ನು ಒಳಗೊಂಡಿರುತ್ತದೆ. ಯಾವುದೇ ವೈಯಕ್ತಿಕ ಅನುಭವದ ತಳಹದಿಯಮೇಲೆ ಅದಕ್ಕೆ ನಾವು ಸಂಬಂಧಿಸಲಾರೆವು. ಆತನು ಕಂಡುಕೊಳ್ಳುವಾಗ ಯೇಸುವಿನ ಕೆಲವು ಹಿಂಬಾಲಕರು ಭಯಪಟ್ಟಿದ್ದು ವಿಚಿತ್ರವಾದದ್ದಾಗಿದೆಯೋ? ಇಲ್ಲವೇ ಇಲ್ಲ. ನಿಮ್ಮ ಮುಂದೆ ನಿಂತಿರುವ ಒಬ್ಬನನ್ನು ಕೆಲವು ದಿನಗಳ ಮೊದಲು ಶಿಲುಬೆಗೆ ಹಾಕಲ್ಪಟ್ಟು ಹೂಣಲ್ಪಟ್ಟದ್ದನ್ನು ನೀವು ನೋಡಿದವನು ನಿಮ್ಮ ಮುಂದೆ ನಿಲ್ಲುವಾಗ ಆಗುವ ಪರಿಣಾಮವನ್ನು ಯೋಚಿಸಿರಿ. ಜೀವಿಸುವ ವ್ಯಕ್ತಿಯು ಸತ್ತುಹೋಗಿ ಹೂಣಲ್ಪಟ್ಟ ವ್ಯಕ್ತಿಯನ್ನು ನೀವು ನೋಡಿದವನೇ ಎಂದು ಸಂಪೂರ್ಣವಾಗಿ ನಂಬಿದರೆ, ನೀವು ನಿಶ್ಚಯವಾಗಿಯೂ "ಬೇರೆ ಜಗತ್ತಿನ" ವಾತಾವರಣವನ್ನು ನಿಶ್ಚಯವಾಗಿ ಭಾವಿಸಿಕೊಳ್ಳುವಿರಿ. ಇವನು "ಆಚೆಯಿಂದ ಹಿಂದಿರುಗಿ ಬಂದ" ವ್ಯಕ್ತಿಯೆಂದು ನೀವು ತಿಳಿದು ಕೊಳ್ಳುವಿರಿ. ಯಾವುದೇ ವಿಚಿತ್ರವಾದದ್ದು ಸಂಭವಿಸುತ್ತಿದೆಯೆಂದು ನೀವು ತಿಳಿಯುವಿರಿ.

ಪುನರುತ್ಥಾನದ ಹಾಗೂ ಅನಂತರದ ಯೇಸುವಿನ ಕಾಣಿಸಿಕೊಳ್ಳುವಿಕೆಗಳ ಸುತ್ತಲೂ ಅಸಾಮಾನ್ಯವಾದದ್ದು ಚಿರುಗುತ್ತಲಿತ್ತು. ಅಪೊಸ್ತಲರು ತಮ್ಮ ವಿವಿಧ ಪ್ರತಿಕ್ರಿಯೆಗಳಿಂದ ಇದನ್ನು ಪ್ರದರ್ಶಿಸಿದರು. ಯೇಸುವೂ ತನ್ನ ಸ್ವಂತ ವಾಕ್ಯಗಳಿಂದ, ಕೃತ್ಯಗಳಿಂದ ಹಾಗೂ ದರ್ಶನಗಳಿಂದ ಈ ವಾತಾವರಣಕ್ಕೆ ಸಹಾಯಮಾಡಿದನು. ತನ್ನ ಪುನರುತ್ಥಾನದ ನಂತರ ಆತನು, "ನನ್ನನ್ನು ಹಿಡಿಯಬೇಡ; ಯಾಕಂದರೆ ನಾನು ಇನ್ನೂ ತಂದೆಯ ಬಳಿಗೆ ಏರಿಹೋದವನಲ್ಲ" (ಯೋಹಾನ 20:17) ಎಂದು ಹೇಳಿದನು. ಯೋಹಾನನ್ನು ಕುರಿತು ಪೇತ್ರನಿಗೆ, "ನಾನು ಬರುವ ತನಕ ಇವನು ಇರಬೇಕೆಂದು ನನಗೆ ಮನಸ್ಸಿದ್ದರೆ ಅದು ನಿನಗೇನು?" (ಯೋಹಾನ 21:23ಬಿ) ಎಂದು ಹೇಳಿದನು. ಆತನ ಕಾಣಿಸುವಿಕೆಗಳು ಅತಿ ವಿಶೇಷವಾದ ಪರಿಸ್ಥಿತಿಗಳಲ್ಲಿರುತ್ತಿದ್ದವು. ಮೊದಲು ಯೇಸುವು ಮುಚ್ಚಲ್ಪಟ್ಟ, ಬೀಗಹಾಕಲ್ಪಟ್ಟ ಬಾಗಿಲುಗಳ ಮುಖಾಂತರ ಎಂದೂ ಕಾಣಿಸಿಕೊಂಡಿದ್ದಿಲ್ಲ, ಇಲ್ಲವೇ ಅದೃಶ್ಯನಾಗಿರಲಿಲ್ಲ. ಕೆಲವು ಸಮಯಗಳಲ್ಲಿ ಆತನು ಸುಲಭವಾಗಿ ಗುರುತಿಸಲ್ಪಡಲಿಲ್ಲ. ಘಟನೆಗಳು ವಿಚಿತ್ರವಾದ ತಿರುವು ಹೊಂದಿದ್ದವು.

ಯೇಸುವಿನ ಭೂಲೋಕದ ಪ್ರಯಾಣವು ಮುಕ್ತಾಯ ಗೊಂಡಿತ್ತು ಎಂಥಾ ಕಥಾನಕ! ಎಂಥಾ ಜೀವನ! ಎಂಥಾ ರಕ್ಷಕ! ದೇವರ ದಕ್ಷತೆಯನ್ನು ಎಂದಾದರೂ ಯೋಚಿಸಿರುವಿರೋ? ಸರ್ವವ್ಯಾಪಿಯಾದ ದೇವರು "ಭೂಲೋಕಕ್ಕೆ ಬಂದು" ಕೆಲವು "ಸಮಯ" ಕಳೆದು ಒಂದೇ ಸಮಯದಲ್ಲಿ ಯಾವಾಗಲೂ ಪ್ರಸನ್ನನಾಗಿರು ನಿತ್ಯತ್ವಕ್ಕೆ ಹೇಗೆ ಹಿಂದಿರುಗುವನು? ತನ್ನ ಸೃಷ್ಟಿಯ ಸಮತೋಲನವನ್ನು ತಲೆಕೆಳಗು ಮಾಡದೇ ಆತನು ಇದನ್ನು ಹೇಗೆ ಮಾಡಬಹುದು? ನಮ್ಮ ನಕ್ಷತ್ರ ಸಮೂಹಗಳಲ್ಲಿ ಹಾಗೂ ಉತ್ಕ್ರಾಂತಿಯ ಏಳುಬೀಳುಗಳಲ್ಲಿ ಭೂಲೋಕದ ಮೇಲೆ ಕ್ರಮವಿಲ್ಲದಿರುವಿಕೆ ಕಾರಣವಾಗದಂತೆ ತನ್ನ ಮಿತಿಯಿಲ್ಲದ ಶಕ್ತಿಯನ್ನು ಆತನು ಹೇಗೆ "ಒಳಗೊಂಡಿರಬೇಕು?" ಉತ್ತರವು ಯೇಸು ಕ್ರಿಸ್ತನಲ್ಲಿ ಕಂಡು ಬರುತ್ತದೆ, ಯಾಕಂದರೆ, "ದೇವರು ಲೋಕವನ್ನು ತನ್ನೊಂದಿಗೆ ಸಮಾಧಾನಪಡಿಸಿಕೊಳ್ಳುತ್ತಿದ್ದನು" (2 ಕೊರಿಂಥ 5:19ಎ).

ಈ ಮಹಿಮೆಯುಳ್ಳ ಅದ್ಭುತ ಕಾರ್ಯವು ಹೇಗೆ ಪೂರ್ತಿಗೊಳಿಸಲ್ಪಟ್ಟಿತೆಂಬುದನ್ನು ನಾವು ಯೋಚಿಸುವಾಗ, ಕ್ರಿಸ್ತನ ಜೀವನದಲ್ಲಿ ಎರಡು ದೊಡ್ಡ ಬದಲಾವಣೆಗಳು

ಸ್ಪಷ್ಟವಾಗಿರುವದನ್ನು ಗಮನಿಸುತ್ತೇವೆ. ಮೊದಲನೆಯದು, ದೈವತ್ವದಿಂದ ಮಾನವತೆಗೆ ಒತ್ತುಕೊಡುವಿಕೆಯಲ್ಲಿ ಬದಲಾಯಿಸಲ್ಪಟ್ಟಿದ್ದು. ಯೇಸು ಶಿಶುವು ದೇವದೂತರ ಸಂಗೀತದ ಪ್ರತಿಧ್ವನಿಗಳ ಮಧ್ಯದಲ್ಲಿ ಬಂದನು, ಆದರೆ ಆತನು ಬಟ್ಟೆಯಲ್ಲಿ ಸುತ್ತಲ್ಪಟ್ಟ ಗೋದಲಿಯಲ್ಲಿ ಮಲಗಿಸಲ್ಪಟ್ಟನು. ಆತನು ಕನ್ಯೆಯಲ್ಲಿ ಜನಿಸಿದ್ದನು. ಆದರೆ ಆತನು ಯೋಸೇಫನ ಮಗನೆಂದು ಯೋಚಿಸಲ್ಪಟ್ಟನು.[1] ಹೀಗೆ ಆತನ ಎಲ್ಲಾ ಜೀವನವಿತ್ತು. ದೈವತ್ವವು ಮನುಷ್ಯನ ರೂಪದಲ್ಲಿ ಪ್ರಕಟಗೊಂಡಿತು. ನರಾವತಾರವು ನಿಜವಾದದ್ದಾಗಿತ್ತು. ಪೌಲನು ಹೀಗೆ ಬರೆದನು:

> ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ. ಆತನ ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು. ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು (ಫಿಲಿಪ್ಪಿ 2:5-8).

ಎರಡನೆಯ ಬದಲಾವಣೆಯು ಮಾನವತೆಯಿಂದ ದೈವತ್ವಕ್ಕೆ ಒತ್ತುಕೊಟ್ಟಿದ್ದರ ಕಡೆಗೆ ತಿರುಗಿದ್ದು. ಆತನ ಮಾನವತೆಯು ಆತನ ದೈವತ್ವಕ್ಕೆ ಮುಸುಕುಹಾಕಿತ್ತು. ಬದಲಾವಣೆಯ ಈ "ವಿಚಿತ್ರತೆಯ" ಮಧ್ಯದಲ್ಲಿ ತೋಮನು ಕೊನೆಗೆ ಮೇಲಕ್ಕೆತ್ತಲ್ಪಡುತ್ತಿರುವ ಮುಸುಕಿನ ಮುಖಾಂತರವಾಗಿ ನೋಡಲು ಶಕ್ತನಾದನು. *"ನನ್ನ ಕರ್ತನೇ, ನನ್ನ ದೇವರೇ!"* (ಯೋಹಾನ 20:28; ಒತ್ತಿ ಹೇಳಿದ್ದು ನನ್ನದು) ಎಂದು ಹೇಳಿ ಅವನು ಯೇಸುವಿನೊಂದಿಗೆ ಮಾತಾಡಿದನು. ಇದು ಒಬ್ಬ ಮನುಷ್ಯನ ಅರಿಕೆ ಎಂದು ನೀವು ಹೇಳಬಹುದು. ಅದು ಸತ್ಯವಾಗಿದೆ, ಆದರೆ ಮಾನವತೆಗೆ ತನ್ನ ಬಗೆಗಿನ ದೇವರ ಪ್ರಕಟಣೆಯಲ್ಲಿ ಅದು ಐತಿಹಾಸಿಕವಾದದ್ದು, ಕೇಂದ್ರವಾದದ್ದು. ಆ ಪ್ರಕಟಣೆಯ ಮಹತ್ವವನ್ನು ಅರಿತುಕೊಳ್ಳಲಿಕ್ಕೆ ಅರಿಕೆ ಮಾಡಲಿಕ್ಕೆ ಮನುಷ್ಯನ ಸಾಮರ್ಥ್ಯದ ತಿರುಗು ಬಿಂದುವೂ ಆಗಿರುತ್ತದೆ.

ಈ ಬದಲಾವಣೆಯು ದಿನಾರೋಹಣದಲ್ಲಿ ಸಂಪೂರ್ಣವಾಯಿತು. ಸಜೀವಿಯಾಗಿ ಪುನಃ ಎಂದೂ ಕಂಡುಕೊಳ್ಳದಂತೆ ಯೇಸುವು ಒಂದು ದಿನ ಅದೃಶ್ಯನಾಗಿ ಹೋಗಲಿಲ್ಲ - ಆತನು ತನ್ನ ಅಪೊಸ್ತಲರೊಂದಿಗೆ ಮಾತಾಡುತ್ತಿದ್ದಂತೆ "ಅವರು ನೋಡುತ್ತಾ ಇದ್ದ ಹಾಗೆ ಆತನು ಏರಿಸಲ್ಪಟ್ಟನು; ಮೋಡವು ಆತನನ್ನು ಕವಿದು ಕೊಂಡದ್ದರಿಂದ ಅವರ ಕಣ್ಣಿಗೆ ಮರೆಯಾದನು" (ಅಪೊಸ್ತಲರ ಕೃತ್ಯ 1:9). ಹೀಗೆ ಮಾನವತೆಯಿಂದ ದೈವತ್ವದ ಕಡೆಗಿನ ಒತ್ತುಕೊಡುವಿಕೆಯ ಬದಲಾವಣೆಯು ಪೂರ್ತಿಗೊಂಡಿತು.

ಈ ಎರಡು ಅಗ್ರಾಹ್ಯವಾದ ಬದಲಾವಣೆಗಳು ಯೇಸುವು ತನ್ನ ಜನನದಲ್ಲಿ ಕಡಿಮೆ ದೇವರೂ ಹಾಗೂ ಹೆಚ್ಚು ಮಾನವನೂ ಆದನು ಇಲ್ಲವೇ ಆತನು ತನ್ನ ಮರಣದಲ್ಲಿ ಕಡಿಮೆ ಮಾನವನೂ ಹೆಚ್ಚು ದೇವರೂ ಆದನೆಂದು ದೃಢಪಡಿಸುವದಿಲ್ಲ. ಪ್ರತಿಯೊಂದು ಬದಲಾವಣೆಯಲ್ಲಿ ಪ್ರಭಾವಶಾಲಿ ಪ್ರದರ್ಶನವನ್ನು ಕೇವಲ ಪರಿಶೀಲಿಸಿದ್ದೇವೆ. ಕ್ರಿಸ್ತ ಯೇಸುವಿನಲ್ಲಿಯ ದೇವರ ವಿಮೋಚನಾ ಕಾರ್ಯವು ತಾನೇ ಪ್ರತ್ಯಕ್ಷವಾಗಿರುವಂತೆ ಅಷ್ಟು ಸರಳವಾದದ್ದಾಗಿರುವದಿಲ್ಲವೆಂಬುದನ್ನು ಕಲಿತು ಕೊಂಡಿದ್ದೇವೆ. ಹಾಗಿದ್ದರೂ ಒಮ್ಮೆ ಗ್ರಹಿಸಲ್ಪಟ್ಟ, ಅದರ ದೇವರ ಪ್ರೀತಿ, ಕೃಪೆ ಹಾಗೂ ದಯೆಯ ವಿಶ್ವಾಸದಲ್ಲಿ, ಪ್ರೀತಿಯಲ್ಲಿ, ಕೃತಜ್ಞತೆಯಲ್ಲಿ ಹಾಗೂ ಸೇವೆಯಲ್ಲಿ ಆತನಿಗೆ ನಮ್ಮ ಜೀವಿತಗಳನ್ನು

ಸಮರ್ಪಿಸಲು ನಡಿಸುತ್ತದೆ.

ಹೀಗಿರುವಾಗ ಬೈಬಲಿನಲ್ಲಿ ಕಂಡುಬರುವ ಸಂಗೀತ ಘೋಷಣೆಯು, "ನರಾವತಾರದ ಸಂಗೀತ" ಎಂದು ಕೆಲವು ಸಲ ಕರೆಯಲ್ಪಟ್ಟದ್ದು "ಕುಮಾರನಾದ ದೇವರು" ಎಂಬ ನಮ್ಮ ಅಧ್ಯಯನವನ್ನು ಮುಕ್ತಾಯಗೊಳಿಸಲು ಯೋಗ್ಯವಾದ ಮುಖ್ಯಪ್ರಸ್ತಾಪವಾಗಿದೆ:

> ದೇವಭಕ್ತಿಯ ಮರ್ಮವು ಮಹತ್ವವುಳ್ಳದ್ದೆಂಬುದು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ: ಅದೇನಂದರೆ - ಆತನು ಶರೀರಧಾರಿಯಾಗಿ ಪ್ರತ್ಯಕ್ಷನಾದನು; ಆತ್ಮ ಸಂಬಂಧವಾಗಿ ನೀತಿವಂತನೆಂದು ತೀರ್ಮಾನಿಸಲ್ಪಟ್ಟನು; ದೇವದೂತರಿಗೆ ಕಾಣಿಸಿಕೊಂಡನು; ಅನ್ಯಜನರಲ್ಲಿ ಪ್ರಸಿದ್ಧಿ ಮಾಡಲ್ಪಟ್ಟನು; ಲೋಕದಲ್ಲಿ ನಂಬಲ್ಪಟ್ಟನು; ಮಹಿಮೆಗೆ ಸೇರಿಸಲ್ಪಟ್ಟನು (1 ತಿಮೊಥೆ 3:16).

---

**ಟಿಪ್ಪಣಿ**

[1]ಲೂಕ 1:34, 35; 2:33, 34, 41, 42, 48; 3:23; ಮತ್ತಾಯ 13:55, 56; ಯೋಹಾನ 6:42.

© 2009 Truth for Today